# ಶಿಕ್ಷಣದಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳಿ



ವಿಜಯವಾಣಿ ಚಿತ್ರ

ಆನೇಕಲ್ಲಿನ ಅಲಯನ್ಸ್ ವಿವಿಯಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಶಿಕ್ಷಣ ತಜ್ಞ ಚೈತನ್ಯ ಎನ್. ಶ್ರೀನಿವಾಸ್, ಅಲಯನ್ಸ್ ವಿವಿ ಕುಲಪತಿ ಅಭಯ್ ಛಬ್ಬಿ, ಉಪಕುಲಪತಿ ಡಾ.ಅನೂಬಾ ಸಿಂಗ್, ಎನ್ಎಚ್ ಆರ್‌ಡಿ ಅಧ್ಯಕ್ಷೆ ಚೈತನ್ಯಾ, ಶ್ರೀನಿವಾಸ್, ನಿರ್ದೇಶಕಿ ಸುರೇಖಾ ಶೆಟ್ಟಿ ಮತ್ತಿತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಆನೇಕಲ್

ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗುತ್ತಿದ್ದು, ತಂತ್ರಜ್ಞಾನದೊಂದಿಗೆ ನೂತನ ಆವಿಷ್ಕಾರ ಅಳವಡಿಸಿಕೊಂಡಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನದ್ದನ್ನು ಕಲಿಸಲು ಸಾಧ್ಯ ಎಂದು ಅಲಯನ್ಸ್ ವಿವಿಯ ಉಪ ಕುಲಪತಿ ಡಾ. ಪುನೀತ್ ಕಾರಿಯಪ್ಪ ಅಭಿಪ್ರಾಯಪಟ್ಟರು.

ತಾಲೂಕಿನ ಅಲಯನ್ಸ್ ಕ್ಯಾಂಪಸ್‌ನಲಿ 90ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಶಾಲೆಗಳ ಪ್ರಾಂಶುಪಾಲರ ಜತೆ ಆಯೋಜಿಸಿದ್ದ ಪರಿವರ್ತನೆಗಾಗಿ ಶಿಕ್ಷಣ ವಿಚಾರಗೋಷ್ಠಿಯಲ್ಲಿ ಮಾತನಾಡಿ, ಮುಂಬರುವ ದಿನಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳ ನಿರೀಕ್ಷೆಯಿದ್ದು, ನೂತನ ವ್ಯವಸ್ಥೆಗೆ ಪೂರಕವಾಗಿ ಶಿಕ್ಷಣ ಸಂಸ್ಥೆಗಳು ಹೊಸತನ್ನು ಅಳವಡಿಸಿಕೊಂಡು, ಕಲಿಕೆಗೆ ಪೂರಕವಾದ ಕ್ರಿಯಾಶೀಲ, ಸೃಜನಾತ್ಮಕ ಚಟುವಟಿಕೆ ಅಳವಡಿಸಿಕೊಳ್ಳಬೇಕು ಎಂದರು.

ಪ್ರಾಥಮಿಕ ಹಂತದಿಂದಲೇ ಕಲಿಕೆಯಲ್ಲಿ ತಾಂತ್ರಿಕತೆ ಅಳವಡಿಸಿಕೊಂಡು, ಸುಲಭವಾಗಿ ಗುಣಮಟ್ಟದ ಶಿಕ್ಷಣ ನೀಡುವಂತಾದರೆ ಸಮಾಜದಲ್ಲಿ ಬದಲಾವಣೆ ಕಾಣಬಹುದು ಎಂದರು.